# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು


ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2550/ಶ್ರೀ ಕ್ರೋಧಿ ನಾಮ ಸಂವತ್ಸರ
15-06-2024 ಜೇಷ್ಠ ಮಾಸ : ಶುಕ್ಲ ಪಕ್ಷ ಶನಿವಾರ

ಪುಟ : ೪ ಸಂಪುಟ : ೭೦ ಸಂಚಿಕೆ : ೦೭
RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

## ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

**ಶುಭಾಶೀರ್ವಚನ** ಶ್ರೀ ಕ್ಷೇತ್ರ ಹೊಂಬುಜ

## 'ಚಮತ್ಕಾರಿ ತಾಯಿತ'

ಮನುಷ್ಯನು ತನ್ನ ಪುರುಷಾರ್ಥದಿಂದ ಕಾರ್ಯ ಸಿದ್ಧಿ ಮಾಡಿಕೊಳ್ಳಬೇಕು. ಸಂಸಾರದ ಬೇರೆಲ್ಲ ಪ್ರಾಣಿಗಳಿಗಿರುವ ಶಕ್ತಿಗಿಂತ ಮನುಷ್ಯ "ವಿವೇಕ" ವೆಂಬ ಶಕ್ತಿಯಿಂದ ಭಿನ್ನವಾಗಿದ್ದಾನೆ. ಅನೇಕ ಬಾರಿ ಕೆಲವರು ಹೇಳುವುದನ್ನು ಕೇಳಿರುತ್ತೇವೆ. "ನಾವು ಸಾಕಷ್ಟು ಕಷ್ಟಪಡುತ್ತೇವೆ. ಆದರೆ ಅದಕ್ಕೆತಕ್ಕಂತೆ ಫಲ ಸಿಗುವುದಿಲ್ಲ. ಎಷ್ಟು ಸಲ ಪ್ರಯತ್ನ ಮೀರಿ ಪರಿಶ್ರಮ ಮಾಡಿದರೂ ನಿರಾಸೆಯೇ ಅಂತಿಮವಾಗಿ ಸಿಗುತ್ತದೆ" ಎಂದು ಗೊಣಗುತ್ತಾ ಇರುತ್ತಾರೆ. ಸಫಲತೆ ಎನ್ನುವುದು ಒಂದೇ ಪ್ರಯತ್ನದಲ್ಲಿ ಅಥವಾ ಅದೃಷ್ಟಕ್ಕೆ ಸಿಗುವಂತಹದ್ದು ಅಲ್ಲ. ಮನುಷ್ಯನು ತನ್ನ ಪ್ರಯತ್ನದ ಮೇಲೆ ವಿಶ್ವಾಸವಿಟ್ಟು ಪರಿಶ್ರಮ ಮಾಡಿದರೆ ನಿಶ್ಚಿತವಾದ ಫಲ ಸಿಗುತ್ತದೆ.

WWW.HOMBUJAPADMAVATI.ORG

ಒಂದೂರಿನಲ್ಲಿ ಒಬ್ಬ ಯುವಕ ಸಾಕಷ್ಟು ಜೀವನದ ಬಗ್ಗೆ ಬೇಸತ್ತು ಒಬ್ಬರು ಗುರುಗಳ ಬಳಿ ಹೋಗಿ ಭವಿಷ್ಯದ ಬಗ್ಗೆ ಕೇಳುತ್ತಾನೆ. ತಾನು ಎಷ್ಟು ಕಷ್ಟಪಟ್ಟರೂ ಯಶಸ್ಸು ಸಿಗುತ್ತಿಲ್ಲ. ಅದರಿಂದ ಜೀವನದಲ್ಲಿ ನೆಮ್ಮದಿಯಿರುವುದಿಲ್ಲ ಎಂದು ಈ ಸಂಕಷ್ಟದಿಂದ ಪಾರಾಗುವ ಬಗೆಯನ್ನು ಕೇಳುತ್ತಾನೆ.

ಗುರುಗಳಿಗೆ ಆತನ ಸಮಸ್ಯೆ ಅರ್ಥವಾಯಿತು. ನಂತರ ಆತನಿಗೆ "ನಿನ್ನ ಸಮಸ್ಯೆಯ ಪರಿಹಾರ ನನ್ನ ಬಳಿಯಿದೆ. ಆತಂಕ ಪಡಬೇಡ ಎಂದು ಒಂದು ತಾಯಿತವನ್ನು ಮಾಡಿ ಆತನ ಕೊರಳಿಗೆ ಹಾಕುತ್ತಾರೆ. ಹಾಗೂ ಈ ತಾಯಿತ ಶಕ್ತಿ ನಿನಗೆ ಸಿಗಬೇಕಾದರೆ ಈ ಒಂದು ರಾತ್ರಿ ಸ್ಮಶಾನದಲ್ಲಿ ಕಳೆಯಬೇಕೆಂದು" ಹೇಳುತ್ತಾರೆ. ಸ್ಮಶಾನವಾಸದ ಬಗ್ಗೆ ಕೇಳುತ್ತಲೇ ಯುವಕನು ಹೌಹಾರುತ್ತಾನೆ. ಭಯದಿಂದ ನನಗೆ ಇದು ಸಾಧ್ಯವಿಲ್ಲವೆಂದು ಹಗಲಲ್ಲೇ ಸ್ಮಶಾನದ ಮುಂದೆ ಹೋಗಲು ಭಯ ಪಡುವ ನಾನು ರಾತ್ರಿ ಅಲ್ಲಿರಬೇಕೆಂದರೆ ಸಾಧ್ಯವೇ ಇಲ್ಲ ಎಂದು ಹೇಳುತ್ತಾನೆ. ಅದಕ್ಕೆ ಗುರುಗಳು "ನೋಡು! ನಿನ್ನ ಕೊರಳಿನಲ್ಲಿರುವ ತಾಯಿತ ತುಂಬಾ ಚಮತ್ಕಾರಿಕವಾಗಿರುವುದು. ಎಂತಹ ವಿಪತ್ತುಗಳು ಬಂದರು ದೂರವಾಗುತ್ತವೆ. ನೀನು ಭಯ ಪಡದೇ ಸ್ಮಶಾನದಲ್ಲಿ ಈ ರಾತ್ರಿ ಕಳೆಯೆಂದು" ಹೇಳುತ್ತಾರೆ. ಆ ರಾತ್ರಿ ಆತ ನಿರ್ಭಿಕನಾಗಿ ಸ್ಮಶಾನದಲ್ಲಿ ಕಳೆಯಲು ಮರುದಿನ ಗುರುಗಳ ಬಳಿ ತನ್ನ ಅನುಭವವನ್ನು ಹೇಳಿ ಈ ತಾಯಿತವು ತುಂಬಾ ದಿವ್ಯಶಕ್ತಿ ಹೊಂದಿದ್ದು, ನಾನು ಖಂಡಿತಾ ಸಾಧನೆ ಮಾಡುವೆ ಎಂದು ಭರವಸೆ ಬಂದಿದೆ ಎಂದು ಆಶೀರ್ವಾದ ಪಡೆದು ಮುಂದೆ ಸಾಗುತ್ತಾನೆ.

ಒಂದು ವರ್ಷ ಕಳೆಯುತ್ತದೆ. ಯುವಕನು ಸಾಕಷ್ಟು ಪರಿಶ್ರಮದಿಂದ ಸಾಧನೆ ಮಾಡುತ್ತಾನೆ. ಊರಿನಲ್ಲಿ ಒಂದೊಳ್ಳೆ ಸ್ಥಾನ-ಮಾನಗಳೊಂದಿಗೆ ಶ್ರೀಮಂತನಾಗಿರುತ್ತಾನೆ. ಅದೆಲ್ಲವು ಗುರುಗಳು ಕೊಟ್ಟಿರುವ ತಾಯಿತದಿಂದಲೇ ಸಾಧ್ಯವಾಗಿದೆ ಎಂದು ನಂಬಿರುತ್ತಾನೆ.

ಕೆಲ ದಿನಗಳಲ್ಲಿ ಗುರುಗಳು ಮರಳಿ ಆ ಊರಿಗೆ ಬರಲು ಯುವಕನು ಮತ್ತೆ ಅವರ ದರ್ಶನ ಮಾಡಿ ಅವರು ಕೊಟ್ಟಿದ್ದ ತಾಯಿತದ ಗುಣಗಾನ ಮಾಡುತ್ತಾನೆ. ಅದರಿಂದಲೇ ಇಷ್ಟು ಸಾಧನೆ ಮಾಡಲು ನನಗೆ ಸಾಧ್ಯವಾಗಿದೆ ಎಂದು ಹೇಳುತ್ತಾನೆ.

ಗುರುಗಳು ನಸುನಕ್ಕು, ಆತನ ಕೊರಳಲ್ಲಿದ್ದ ತಾಯಿತವನ್ನು ತೆಗೆದು ಬಿಚ್ಚಿ ಅದರಲ್ಲಿದ್ದ ತಾಮ್ರದ ಖಾಲಿ ತಗಡನ್ನು ತೋರಿಸುತ್ತಾರೆ. ಇದರಲ್ಲಿ ಏನು ಇಲ್ಲವೆಂದು ಇದೆಲ್ಲವು ನಿನ್ನ ಆತ್ಮ ವಿಶ್ವಾಸದಿಂದ ಸಾಧ್ಯವಾಗಿದೆಯೆಂದು ಹೇಳುತ್ತಾರೆ. ನಿನ್ನ ಅಂತರಂಗದಲ್ಲಿ ಅನಂತ ಶಕ್ತಿ ಇದೆ. ಅದೇ "ವಿಶ್ವಾಸ" (ನಂಬಿಕೆ). ಅದು ನಮ್ಮ ಶಕ್ತಿ ಮೇಲೆ ಇದ್ದರೆ ನಾವು ಮಾಡುವ ಪ್ರತಿ ಕಾರ್ಯದಲ್ಲಿ ಸಿದ್ಧಿಯಾಗುತ್ತದೆ. ಯಾವುದೇ ಯಂತ್ರ-ಮಂತ್ರದ ಪರಾವಲಂಬನೆಯಿಲ್ಲದೇ ನಿನ್ನ ಯೋಚನೆ ಕಾರ್ಯಗಳ ಮೇಲೆ ನಂಬಿಕೆಯಿಟ್ಟು ನಡೆ ಎಂದು ಹೇಳುತ್ತಾರೆ.

**ಸಹೃದಯರೇ,**

**ಸಫಲತೆಯು ನಮ್ಮ ಅಂತರಂಗ ಶಕ್ತಿ ಮೇಲಿನ ನಂಬಿಕೆಯಲ್ಲಿದೆ. ಸತತ ಪ್ರಯತ್ನವು ಗುರಿಯನ್ನು ತಲುಪುವಲ್ಲಿ ಸಹಕಾರಿಯಾಗುತ್ತದೆ. ಶಾಲಾ-ಕಾಲೇಜುಗಳು ಆರಂಭವಾಗಿದೆ. ಕೃಷಿ ಚಟುವಟಿಕೆ ನಡೆದಿದೆ. ಪ್ರಕೃತಿಯ ನಿಯಮ ಎಲ್ಲರಿಗೂ ಒಂದೇ ಆಗಿದೆ. ಅದೇ "ಉದ್ಯಮೇನ ಹಿ ಸಿದ್ಧ್ಯಂತೇ" ಅಂದರೆ ನಿರಂತರ ಕಠಿಣ ಪರಿಶ್ರಮದಿಂದಲೇ ಕಾರ್ಯ ಸಿದ್ಧಿಯಾಗುತ್ತದೆ.**

**ಶುಭವಾಗಲಿ.**

ಶ್ರೀಕ್ಷೇತ್ರ ಕುಂಥುಗಿರಿಯಲ್ಲಿ 'ವಂದೇ ಗುರೂಣಾಂ-ಗುರುಂ'

## ಅಭಿನಂದನಾ ಸಮಾರಂಭ

### 77ನೇ ವಾರ್ಷಿಕ ಮಹೋತ್ಸವ - 57ನೇ ದೀಕ್ಷಾ ವರ್ಷ ಪೂರ್ಣ ದಿನ ಆಚರಣೆ



**ಕೊಲ್ಹಾಪುರ (ಮಹಾರಾಷ್ಟ್ರ) :** ಹಾತಕಣಂಗಲೆ ತಾಲೂಕಿನ ಅಳತೆ ಗ್ರಾಮದ ಸುಕ್ಷೇತ್ರ ಕುಂಥುಗಿರಿ (ಕುಂತಲಗಿರಿ) ಯಲ್ಲಿ 'ವಂದೇ ಗುರುನಾಂ' ಪರಮಪೂಜ್ಯ ಭಾರತ ಗೌರವ, ಗಣಾಧಿಪತಿ, ಗಣಧರಾಚಾರ್ಯ ಶ್ರೀ ಕುಂಥುಸಾಗರ ಜೀ ಮಹಾರಾಜರ 77ನೇ ವಾರ್ಷಿಕೋತ್ಸವ ಹಾಗೂ 57ನೇ ದೀಕ್ಷಾ ವರ್ಷ ಪೂರ್ಣ ದಿನ ಆಚರಣೆ ಹಾಗೂ ಅಭಿನಂದನಾ ಕಾರ್ಯಕ್ರಮವು ಮೇ. 26, 2024ರ ಭಾನುವಾರದಂದು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ವೈಭವದಿಂದ ಸಂಪನ್ನಗೊಂಡಿತು.

2ನೇ ಪುಟಕ್ಕೆ

ಶ್ರುತಪಂಚಮಿ ಪರ್ವ:

## "ಆಧ್ಯಾತ್ಮಿಕ ಜ್ಞಾನಪ್ರಭೆ ಜೀವನ ಮೌಲ್ಯಗಳನ್ನು ಸಂವರ್ಧಿಸಲಿ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ





**ಹೊಂಬುಜ :** ಜೈನ ಪರಂಪರೆಯಲ್ಲಿ ಶ್ರುತಪಂಚಮಿ ಪರ್ವವು ಜೈನ ಧರ್ಮದ ಆಗಮ ಗ್ರಂಥಗಳ ಮಹತ್ವವನ್ನು ಸಾರುತ್ತದೆ. ಪ್ರಾಚೀನ ಜೈನಾಚಾರ ಗ್ರಂಥಗಳು ಆಧ್ಯಾತ್ಮಿಕ ಚಿಂತನೆಗೆ ರಚಿಸಲ್ಪಟ್ಟಿವೆ. ಶ್ರುತ ಎಂದರೆ ಕಿವಿಯಿಂದ ಕೇಳಿದ ದಿವ್ಯಧ್ವನಿಯ ಉಪದೇಶಗಳು ಕೃತಿ ರೂಪದಲ್ಲಿ ಧರ್ಮ ಆಚರಣೆಯ ದಾರಿದೀಪವಾಗಿ ಇಂದು ಧಾರ್ಮಿಕ ಮನೋಧರ್ಮ ಬೆಳೆಸಿಕೊಳ್ಳಲು ಪೂರಕವಾಗಿವೆ ಎಂದು

2ನೇ ಪುಟಕ್ಕೆ

## 77ನೇ ವಾರ್ಷಿಕ ಮಹೋತ್ಸವ - 57ನೇ ದೀಕ್ಷಾ ವರ್ಷ ಪೂರ್ಣ ದಿನ ಆಚರಣೆ

1ನೇ ಪುಟದಿಂದ

ಮುಂಬೈನ ಶ್ರೀ ವೀರಶಾಸನ ಪ್ರಭಾವನ ಟ್ರಸ್ಟ್ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ಯುಗಳ ಮುನಿಗಳಾದ ಮುನಿಶ್ರೀ ಅಮೋಘಕೀರ್ತಿ ಮಹಾರಾಜರ ಹಾಗೂ ಮುನಿಶ್ರೀ ಅಮರಕೀರ್ತಿ ಮಹಾರಾಜರ ಪಾವನ ಸಾನಿಧ್ಯದಲ್ಲಿ ನಡೆದ ಈ ಭವ್ಯ ಕಾರ್ಯಕ್ರಮದಲ್ಲಿ ದಕ್ಷಿಣ ಭಾರತದ ಎಲ್ಲಾ ಗೌರವಾನ್ವಿತ ಪರಮಪೂಜ್ಯ ಸ್ವಸ್ತಿಶ್ರೀ ಭಟ್ಟಾರಕ ಮಹಾಸ್ವಾಮೀಜಿಗಳವರು ಉಪಸ್ಥಿತರಿದ್ದು ಆಶೀರ್ವಚನ ನೀಡಿದರು.

ಇದೇ ಸಂದರ್ಭದಲ್ಲಿ ಕುಂಥುಸಾಗರ ಜೀ ಮಹಾರಾಜರವರ ಪಾದಪೂಜೆ ಕಾರ್ಯಕ್ರಮ ನಡೆಯಿತು. ಮುಂಬೈನ ಶ್ರೀವೀರಶಾಸನ ಪ್ರಭಾವನ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸಕಲ ದಿಗಂಬರ ಜೈನ ಸಮಾಜಗಳಾದ ಬೆಂಗಳೂರು, ಅವಿಭಾಜಿತ ದಕ್ಷಿಣ ಕನ್ನಡ ಜಿಲ್ಲೆ, ಹುಬ್ಬಳ್ಳಿ, ಹಾಸನ, ಮೈಸೂರು, ಮಂಡ್ಯ, ಬೆಳ್ತೂರು, ಬೆಳಗಾವಿ, ಕೊಲ್ಹಾಪುರ, ಸಾಂಗಲಿ, ಇಚಲಕಾರಂಜೀ, ತುಮಕೂರು ಸೇರಿದಂತೆ ಭಾರತೀಯ ಜೈನ್ ಮಿಲನ್, ಕರ್ನಾಟಕ ಜೈನ ಅಸೋಸಿಯೇಷನ್ (ಕೆ.ಜೆ.ಎ.), ಅಖಿಲ ಕರ್ನಾಟಕ ಜೈನ ಮಹಿಳಾ ಒಕ್ಕೂಟ, ಮುಂಬೈನ ಶ್ರೀ ವೀರಶಾಸನ ಪ್ರಭಾವನ ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ರೂಬಿ ಕೀರ್ತಿ ದಾವಡಾ, ಪ್ರಧಾನ ಕಾರ್ಯದರ್ಶಿ ಶ್ರೀ ರಾಕೇಶ್ ಜೈನ್, ಖಜಾಂಚಿ ಶ್ರೀ ಅನೀಕ ಡೊಟಿಯ ಸೇರಿದಂತೆ ಕರ್ನಾಟಕ ಹಾಗೂ ಮಹಾರಾಷ್ಟ್ರ ದೇಶದ ವಿವಿಧ ಭಾಗಗಳಿಂದ ಜೈನ ಸಮಾಜದ ಬಂಧುಗಳು ಶ್ರಾವಕ- ಶ್ರಾವಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಕರ್ನಾಟಕ ರಾಜ್ಯ ಜೈನ ಮಹಿಳಾ ಒಕ್ಕೂಟದ ಅಧ್ಯಕ್ಷೆ ಪದ್ಮಿನಿ ಪದ್ಮರಾಜ್ ಕರ್ನಾಟಕದ ವಿವಿಧ ಜೈನ ಮಹಿಳಾ ಒಕ್ಕೂಟಗಳ ಜಿಲ್ಲಾಧ್ಯಕ್ಷರುಗಳು ಹಾಗೂ ಪದಾಧಿಕಾರಿಗಳು ಭಾಗವಹಿಸಿದ್ದರು. ಸಾಮೂಹಿಕ ದೀಪ ಪ್ರಜ್ವಲನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಭಾರತೀಯ ಜೈನ್ ಮಿಲನ್ ರಾಷ್ಟ್ರೀಯ ಕಾರ್ಯಧ್ಯಕ್ಷರಾದ ಧರ್ಮಸ್ಥಳ ಶ್ರೀ ಸುರೇಂದ್ರ ಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

## ಶ್ರುತಪಂಚಮಿ ಪರ್ವ:

1ನೇ ಪುಟದಿಂದ

ಹೊಂಬುಜ ಶ್ರೀಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳು ಶ್ರುತಪಂಚಮಿ ಪೂಜಾ ವಿಧಿಗಳ ಬಳಿಕ ಪ್ರವಚನದಲ್ಲಿ ತಿಳಿಸಿದರು.

ಲಿಪಿ ರೂಪದಲ್ಲಿ ಜೈನ ಧರ್ಮ ಗ್ರಂಥಗಳು ಧವಳಾ-ಜಯಧವಳಾ-ಮಹಾಧವಳಾ ಅಪೂರ್ವ ಗ್ರಂಥಗಳಾಗಿದ್ದು, ಸಾಹಿತ್ಯ-ಭೂಗೋಳ-ಖಗೋಳ-ಜ್ಯೋತಿಷ್ಯ-ವಿಜ್ಞಾನ-ಗಣಿತ-ಚಿತ್ರಕಲೆ-ವೈದ್ಯ ವಿಜ್ಞಾನಗಳನ್ನು ಜ್ಞಾನಾಸಕ್ತರಿಗೆ ಪ್ರಕಟಿಸಲ್ಪಟ್ಟಿದೆ. ಜ್ಯೇಷ್ಠ ಶುಕ್ಲ ಪಂಚಮಿಯಂದು ಲಿಪಿಬದ್ಧ ಜೈನಧರ್ಮ ಗ್ರಂಥಗಳು ಲೋಕಾರ್ಪಣೆಗೊಂಡ ಸ್ಮರಣೆಗಾಗಿ ಜಿನವಾಣಿ ಶ್ರೀ ಸರಸ್ವತಿ ದೇವಿ ಆರಾಧನೆ, ಶ್ರುತಸ್ಕಂದ ಪೂಜೆ ನೆರವೇರಿಸುವ ಪೂರ್ವ ಪರಂಪರೆಯ ಐತಿಹ್ಯವನ್ನು ಶ್ರೀಗಳು ವಿವರಿಸಿದರು. ಪ್ರತಿಯೋರ್ವರು ಸ್ವಾಧ್ಯಾಯ ಮಾಡುವುದರಿಂದ ಜ್ಞಾನ ಸಂಪತ್ತನ್ನು ವೃದ್ಧಿಸಿ ಜೀವನ ಮೌಲ್ಯಗಳನ್ನು ಧರ್ಮಶ್ರದ್ಧೆಯಿಂದ ಸಂವರ್ಧಿಸಬೇಕು ಎಂದು ಹರಸಿದರು.

WWW.HOMBUJAPADMAVATI.ORG

ಧರಸೇನ ಆಚಾರ್ಯರು ಭೂತಬಲಿ ಮತ್ತು ಪುಷ್ಪದಂತ ಮುನಿಶ್ರೀ ಶಿಷ್ಯರಿಗೆ ಜ್ಞಾನಾಮೃತವನ್ನು ಧಾರೆ ಎರೆದರು. ಹೀಗೆ ದ್ವಾದಶಾಂಗ ಧರ್ಮಗ್ರಂಥ ರಚನೆಯಾಯಿತು. ಆ ಸುದಿನವೇ ಜ್ಯೇಷ್ಠ ಶುಕ್ಲ ಪಂಚಮಿ ಆಗಿದ್ದರಿಂದ ಇಂದಿಗೂ 'ಶ್ರುತಪಂಚಮಿ' ಪರ್ವ ಆಚರಣೆಯಲ್ಲಿದೆ. ಷಟ್‌ಖಂಡಾಗಮ ಸೂತ್ರಗಳು ಆತ್ಮನ ಕರ್ಮಕ್ಷಯಕ್ಕೆ ಪೂರಕವಾಗಿದೆ ಎಂದರು.

ಅತಿಶಯ ಶ್ರೀ ಕ್ಷೇತ್ರದಲ್ಲಿ ಶ್ರೀ ಸರಸ್ವತಿ ದೇವಿ ಆರಾಧನೆ, ಜಿನವಾಣಿ-ಶ್ರುತಸ್ಕಂದ ಪೂಜೆ, ಧವಳತ್ರಯ ಗ್ರಂಥಗಳ ಪಲ್ಲಕ್ಕಿ ಉತ್ಸವ ಶ್ರೀ ಪಾರ್ಶ್ವನಾಥ ಸ್ವಾಮಿ, ಶ್ರೀ ಪದ್ಮಾವತಿ ದೇವಿ ವಿಶೇಷ ಅಲಂಕಾರ ಮಹಾಪೂಜೆಗಳು ಆರ್ಯಿಕಾ ಶ್ರೀ ಶಿವಮತಿ ಮಾತಾಜಿಯವರ ಹಾಗೂ ಸ್ವಸ್ತಿಶ್ರೀಗಳ ಸಾನಿಧ್ಯದಲ್ಲಿ ನೆರವೇರಿತು.

ಹುಂಚ ಜೈನ ಸಮಾಜ, ಪದ್ಮಾವತಿ ಮಹಿಳಾ ಸಮಾಜ, ಊರ-ಪರವೂರ ಭಕ್ತಾದಿಗಳು ಶ್ರುತಪಂಚಮಿ ಪರ್ವದಲ್ಲಿ ಪಾಲ್ಗೊಂಡರು.



(ಜಿನ-ದನಿ)

ಆಯ-ವಯಾಣ ವಿಣ್ಣಾಣೀ, ಅತ್ಥಸ್ಸ ಹು ಪಬಂಧಗಂ ।
ಕಮಂಡಲುವ್ವ ಹೊದವ್ವೋ, ಅತ್ಥಸ್ಸ ಸುಪಬಂಧಣಂ ॥26॥

ಅರ್ಥ: ಹಣಕಾಸಿನ ವ್ಯವಹಾರ ಮಾಡುವವನಿಗೆ ಲಾಭ-ಹುಡುಕುವಿಕೆಯಲ್ಲಿ ವಿಜ್ಞಾನಿಯಾಗಿರಬೇಕು. ಅರ್ಥದ (ಸಂಪತ್ತು) ಸುಪ್ರಬಂಧನ ಕಮಂಡಲುವಿನ ಹಾಗೆ ಇರಬೇಕು.

## ಬರಲಿರುವ ಪರ್ವದಿನಗಳು

ಕ್ರೋಧಿನಾಮ ಸಂವತ್ಸರದ

ಜ್ಯೇಷ್ಠಮಾಸ ಶುಕ್ಲಪಕ್ಷ ದಶಮಿಯಿಂದ ಆಷಾಢಮಾಸ ಶುಕ್ಲಪಕ್ಷ ನವಮಿಯವರೆಗೆ

**ಜ್ಯೇಷ್ಠ ಮಾಸ:**

ಜೂ. 16 ಭಾನು-ದಶಮಿ-ಹಸ್ತ
ಜೂ. 17 ಸೋಮ-ಏಕಾದಶಿ-ಚಿತ್ತ
ಜೂ. 18 ಮಂಗಳ-ಏಕಾದಶಿ-ಸ್ವಾತಿ
ಜೂ. 19 ಬುಧ-ದ್ವಾದಶಿ-ವಿಶಾಖ
ಜೂ. 20 ಗುರು-ತ್ರಯೋದಶಿ-ಅನುರಾಧ
ಜೂ. 21 ಶುಕ್ರ-ಚತುರ್ದಶಿ-ಜ್ಯೇಷ್ಠ
ಜೂ. 22 ಶನಿ-ಹುಣ್ಣಿಮೆ-ಪ್ರತಿಪದ-ಮೂಲ
ಜೂ. 23 ಭಾನು-ಬಿದಿಗೆ-ಪೂ.ಷಾ.
ಜೂ. 24 ಸೋಮ-ತದಿಗೆ-ಉ.ಷಾ.
ಜೂ. 25 ಮಂಗಳ-ಚತುರ್ಥಿ-ಶ್ರವಣ
ಜೂ. 26 ಬುಧ-ಪಂಚಮಿ-ಧನಿಷ್ಠ
ಜೂ. 27 ಗುರು-ಷಷ್ಠಿ-ಶತಭಿಷ
ಜೂ. 28 ಶುಕ್ರ-ಸಪ್ತಮಿ-ಪೂ.ಭಾ.
ಜೂ. 29 ಶನಿ-ಅಷ್ಟಮಿ-ಉ.ಭಾ.
ಜೂ. 30 ಭಾನು-ನವಮಿ-ರೇವತಿ
ಜು. 01 ಸೋಮ-ದಶಮಿ-ಅಶ್ವಿನಿ-ಭರಣಿ
ಜು. 02 ಮಂಗಳ-ಏಕಾದಶಿ-ಕೃತ್ತಿಕಾ
ಜು. 03 ಬುಧ-ದ್ವಾದಶಿ-ರೋಹಿಣಿ
ಜು. 04 ಗುರು-ತ್ರಯೋದಶಿ-ಚತುರ್ದಶಿ, ಮೃಗಶಿರಾ
ಜು. 05 ಶುಕ್ರ-ಅಮವಾಸ್ಯೆ-ಆರಿದ್ರಾ

**ಆಷಾಢ ಮಾಸ:**

ಜು. 06 ಶನಿ-ಪ್ರತಿಪದ-ಪುನರ್ವಸು
ಜು. 07 ಭಾನು-ಬಿದಿಗೆ-ಪುಷ್ಯ
**ಜು. 08 ಸೋಮ-ತದಿಗೆ-ಪುಷ್ಯ, ಹೊಂಬುಜ ಕ್ಷೇತ್ರದ ಸ್ವ॥ ಹೇಮರತ್ನ ಸಾಗರ ಸ್ವಾಮೀಜಿಯವರ ಪುಣ್ಯತಿಥಿ.**
ಜು. 09 ಮಂಗಳ-ತದಿಗೆ-ಆಶ್ಲೇಷಾ
ಜು. 10 ಬುಧ-ಚತುರ್ಥಿ-ಮಘಾ
ಜು. 11 ಗುರು-ಪಂಚಮಿ-ಪೂರ್ವಾ
ಜು. 12 ಶುಕ್ರ-ಷಷ್ಠಿ-ಉತ್ತರ
ಜು. 13 ಶನಿ-ಸಪ್ತಮಿ-ಹಸ್ತ
**ಜು. 14 ಭಾನು-ಅಷ್ಟಮಿ-ಚಿತ್ತ, ಚಾತುರ್ಮಾಸ ಪ್ರಾರಂಭ, ಶ್ರೀಕ್ಷೇತ್ರ ಹೊಂಬುಜದಲ್ಲಿ ಚಾತುರ್ಮಾಸ ಆರಂಭದ ವಿಶೇಷ ಪೂಜೆ.**
ಜು. 15 ಸೋಮ-ನವಮಿ-ಸ್ವಾತಿ

## ಗುರುದೇವ ಪತ್ರಿಕೆಯ ಅಜೀವ ಸದಸ್ಯರ ಶುಭನಾಮಾವಳಿಗಳು

1) ಬಾಹುಬಲಿ ಗಡಗಡೆ, ಕಲಬುರಗಿ 1,000=00

ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು ದಾನ ನೀಡಿದವರಿಗೆ ಶುಭಾಶೀರ್ವಾದ ಮಾಡಿರುತ್ತಾರೆ.

## ವಿದ್ಯಾರ್ಥಿ ವೇತನ

**ಬೆಂಗಳೂರು :** ಕೊಪ್ಪಳ, ಬಳ್ಳಾರಿ, ರಾಯಚೂರು, ಹಾವೇರಿ, ಗದಗ ಮತ್ತು ದಾವಣಗೆರೆ ಜಿಲ್ಲೆಗಳ ಜೈನ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಎಸ್.ಎಸ್.ಎಲ್.ಸಿ. ಯಲ್ಲಿ ಕನಿಷ್ಠ 85% ಅಂಕ ಪಡೆದು ಈ ವರ್ಷ ಮೊದಲ ಪಿ.ಯು.ಸಿ. ಅಥವಾ ಡಿಪ್ಲೋಮ ಕೋರ್ಸಿಗೆ ಪ್ರವೇಶ ಪಡೆದವರಿಂದ ಶ್ರೀಮತಿ ಜಯಮ್ಮ ಜಿ. ದೇಸಾಯಿ ಸ್ಮರಣಾರ್ಥ ಚಾರಿಟೆಬಲ್ ಟ್ರಸ್ಟ್‌ನಿಂದ 9ನೇ ವರ್ಷದ ವಿದ್ಯಾರ್ಥಿ ವೇತನಕ್ಕೆ (2023-24) ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು, ಸ್ವ ವಿಳಾಸವಿರುವ ರೂ. 5 ಸ್ಟಾಂಪ್ ಹಚ್ಚಿದ ಲಕೋಟೆಯನ್ನು ಸಾಧಾರಣ ಅಂಚೆಯಲ್ಲಿ ಅರ್ಜಿಯನ್ನು ಪಡೆದು ಮೂಲ ದಾಖಲೆಗಳೊಂದಿಗೆ ವ್ಯವಸ್ಥಾಪಕ ಧರ್ಮದರ್ಶಿ, ಪ್ರೊ. ಆರ್.ಜಿ. ದೇಸಾಯಿ, ನಂ-50, 'ಸರ್ವಾರ್ಥಸಿದ್ಧಿ' ಅವನಿಶ್ರೀಂಗೇರಿ ನಗರ, 7ನೇ ಅಡ್ಡರಸ್ತೆ, ಬಿ.ಟಿ.ಎಂ. 6ನೇ ಹಂತ, ನ್ಯಾನಪ್ಪನಹಳ್ಳಿ ರಸ್ತೆ, ಬೇಗೂರು ಅಂಚೆ, ಬೆಂಗಳೂರು-560114 ಈ ವಿಳಾಸಕ್ಕೆ ದಿನಾಂಕ 31-08-2024ರ ಒಳಗೆ ಸಲ್ಲಿಸಲು ತಿಳಿಸಿಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ: 080-26485086, ಮೊ: 9886741507.

## ಪ್ರತಿಭಾ ಪುರಸ್ಕಾರ 2024

**ಬೆಂಗಳೂರು :** ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ಸಂರಕ್ಷಕತ್ವದಲ್ಲಿ ನಡೆಯುತ್ತಿರುವ ಬೆಂಗಳೂರಿನ ಜೆ.ಪಿ. ನಗರದಲ್ಲಿರುವ ಭಗವಾನ್ ಶ್ರೀ ಶೀತಲನಾಥ ಎಜುಕೇಷನಲ್ ಮತ್ತು ಚಾರಿಟಬಲ್ ಟ್ರಸ್ಟ್‌ನ ವತಿಯಿಂದ ಜೈನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ದಿನಾಂಕ 14-07-2024ರಂದು 29ನೇ ವಾರ್ಷಿಕ ಪೂಜಾ ಮಹೋತ್ಸವದಂದು ನೀಡಲು ಟ್ರಸ್ಟ್ ತೀರ್ಮಾನಿಸಿದ್ದು, ಆದ ಪ್ರಯುಕ್ತ ಬೆಂಗಳೂರಿನಲ್ಲಿರುವ 2024ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಯಲ್ಲಿ ಶೇ. 95% ಮತ್ತು ಮೇಲ್ಪಟ್ಟು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಲಾಗುವುದು.

ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ, ಆಧಾರ ಕಾರ್ಡ್ ಪ್ರತಿ ಮತ್ತು ಮೊಬೈಲ್ ಸಂಖ್ಯೆಯೊಂದಿಗೆ ಕಾರ್ಯದರ್ಶಿಯವರ ವಿಳಾಸ: ಜಿನೇಂದ್ರ ಹೊಸಮನಿ, ಕಾರ್ಯದರ್ಶಿ, ನಂ.127, ಕಾಶಿನಗರ, 5ನೇ ಮುಖ್ಯರಸ್ತೆ, ಯಲಚೇನಹಳ್ಳಿ, ಬೆಂಗಳೂರು-560111ಕ್ಕೆ 30-06-2024 ರೊಳಗೆ ಕಳುಹಿಸಿಕೊಡುವುದು. ಹೆಚ್ಚಿನ ಮಾಹಿತಿಗಾಗಿ: ಜಿನೇಂದ್ರ ಹೊಸಮನಿ ಕಾರ್ಯದರ್ಶಿ, ಮೊ: 82175 95676, ಎಸ್.ವಿ. ಧನ್ಯಕುಮಾರ್, ಡೆಪ್ಯೂಟಿ ಮ್ಯಾನೇಜಿಂಗ್ ಟ್ರಸ್ಟಿ ಮೊ: 93412 24133

ಗುರುದೇವ ಪತ್ರಿಕೆಗೆ ಚಂದಾದಾರರಾಗಿರಿ

### ಅಖಿಲ ಕರ್ನಾಟಕ ಜೈನ ಮಹಿಳಾ ಒಕ್ಕೂಟ: ರಜತ ಮಹೋತ್ಸವ

## "ಮುನಿ ಪರಂಪರೆ ಕಾಪಾಡುವಲ್ಲಿ ಮಹಿಳೆಯರ ಪಾತ್ರ ಮಹತ್ವದ್ದು"

– ಶ್ರೀಮತಿ ಹೇಮಾವತಿ ವೀ. ಹೆಗಡೆ




**ಧರ್ಮಸ್ಥಳ:** ಸಮಾಜಕ್ಕೆ ಶಾಂತಿ, ಅಹಿಂಸೆ ಸಾರುವ ಮುನಿ ಪರಂಪರೆಯನ್ನು ಕಾಪಾಡುವಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ ಎಂದು ಜೈನ ಮಹಿಳಾ ಒಕ್ಕೂಟದ ಗೌರವಾಧ್ಯಕ್ಷರಾದ ಹೇಮಾವತಿ ವಿ. ಹೆಗ್ಗಡೆಯವರು ಅಮೃತವರ್ಷಿಣಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಜೈನ ಮಹಿಳಾ ಒಕ್ಕೂಟದ ಬೆಳ್ಳಿ ಹಬ್ಬ ಸಂಭ್ರಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಒಕ್ಕೂಟವು ಮುನಿಸೇವೆ, ಸ್ವಾಧ್ಯಾಯ ಕಾರ್ಯಗಳಲ್ಲಿ ಭಾಗಿಯಾಗಿದೆ. ದೇಶದ ಮುನಿ ಪರಂಪರೆ ಹಾಗೂ ಸಮಾಜ ಸೇವೆಯನ್ನು ಜೈನ ಸಮಾಜದ ಸರ್ವರು ಗೌರವಿಸಬೇಕಿದೆ. ಶ್ರಮಣ ಪರಂಪರೆಯಲ್ಲಿ ತ್ಯಾಗ, ವಿರಕ್ತಿಗೆ ಆದ್ಯತೆ ಇದೆ ಎಂದು ಮಾತನಾಡಿದರು.

ಸಮಾರಂಭ ಉದ್ಘಾಟಿಸಿದ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಒಕ್ಕೂಟವೆಂದರೆ ಸಂಘದ ಕಾರ್ಯಕ್ರಮಗಳನ್ನು ಗುರುತಿಸಿ ತಪ್ಪು-ಒಪ್ಪುಗಳನ್ನು ತಿದ್ದಿ-ತೀಡಿ ಜನರಿಗೆ ಮಾರ್ಗದರ್ಶನ ನೀಡುವುದಾಗಿದೆ. ಸಂಘದ ಉದ್ದೇಶ ಬೆಳವಣಿಗೆ ಅದನ್ನು ಪ್ರೇರೇಪಿಸುವುದಾಗಿದೆ. ಧರ್ಮಸ್ಥಳ ಒಕ್ಕೂಟಗಳಲ್ಲಿ 57 ಲಕ್ಷ ಜನರಿದ್ದು ಅವರೇ ಸಂಘದ ಬೆಳವಣಿಗೆಗೆ ಕಾರ್ಯನಿರ್ವಹಿಸುತ್ತಿದ್ದಾರೆ. ಇದಕ್ಕೆಲ್ಲ ಮಾರ್ಗದರ್ಶಕರು ಮಹಿಳೆಯರೇ ಆಗಿದ್ದಾರೆ ಎಂದರು.

ಚಿತ್ರನಟಿ ಪದ್ಮಜಾರಾವ್, ಹೃದಯ ರೋಗ ತಜ್ಞ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ, ಡಾ. ನೀರಜಾ ನಾಗೇಂದ್ರ ಮಾತನಾಡಿದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸುಮನ್ ಪತ್ರಾವಳಿ, ವೀಣ ಶೆಟ್ಟಿ, ಸುಶೀಮಾ ಯಶವಂತ್, ಛಾಯಾ ಸುನೀಲ್, ಮೈಸೂರಿನ ಕು. ಅನನ್ಯ ಜೈನ್ ರವರನ್ನು ಸನ್ಮಾನಿಸಲಾಯಿತು. ಭಾರತೀಯ ಜೈನ್ ಮಿಲನ್ ರಾಷ್ಟ್ರೀಯ ಕಾರ್ಯಾಧ್ಯಕ್ಷ ಶ್ರೀ ಸುರೇಂದ್ರ ಕುಮಾರ್, ಶ್ರೀಮತಿ ಅನಿತಾ ಸುರೇಂದ್ರ ಕುಮಾರ್, ಶ್ರೀ ಡಿ. ಹರ್ಷೇಂದ್ರ ಕುಮಾರ್, ಶ್ರೀಮತಿ ಸುಪ್ರಿಯಾ ಹರ್ಷೇಂದ್ರ ಕುಮಾರ್, ಶ್ರದ್ಧಾ ಅಮಿತ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪದ್ಮಿನಿ ಪದ್ಮರಾಜ್ ಸ್ವಾಗತಿಸಿದರು. ವೈಜಯಂತಿ ಪ್ರಸ್ತಾವಿಕ ನುಡಿಗಳನಾಡಿದರು. ಕುಮುದಾ ನಾಗಭೂಷಣ ನಿರೂಪಿಸಿದರು.

WWW.HOMBUJAPADMAVATI.ORG

## ಜೈನ ಸಮಾಜದ ಅಧ್ಯಕ್ಷರಾಗಿ ಸುನಿಲ್‌ಕುಮಾರ್ ಡಿ. ಆಯ್ಕೆ



**ದಾವಣಗೆರೆ :** ಇಲ್ಲಿಯ ಶ್ರೀ ಆದಿನಾಥ ಜಿನಮಂದಿರದಲ್ಲಿ ನಡೆದ ದಿಗಂಬರ ಜೈನ ಸಮಾಜದ ಶ್ರೀ ಮಹಾವೀರ ಸಂಘದ ನೂತನ ಕಾರ್ಯಕಾರಿ ಸಮಿತಿ ಸಭೆಯಲ್ಲಿ 25 ವರ್ಷಗಳಿಂದ ಸಂಘದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದ ಉದ್ಯಮಿ ಶ್ರೀ ಸುನಿಲ್‌ಕುಮಾರ್ ಡಿ. ರವರನ್ನು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ನೂತನ ಕಾರ್ಯದರ್ಶಿಯಾಗಿ ಶ್ರೀ ಚಂದ್ರಪ್ರಭು ಬಿ. ಉಪಾಧ್ಯಕ್ಷರುಗಳಾಗಿ ಹಿರಿಯ ಪತ್ರಕರ್ತರಾದ ಶ್ರೀ ಎಸ್. ಬಿ. ಜಿನದತ್ತ ಮತ್ತು ಶ್ರೀ ನೇಮಿರಾಜ್ ಡಿ.(ಅಕ್ಕಿ) ಸಹ-ಕಾರ್ಯದರ್ಶಿಯಾಗಿ ಶ್ರೀ ಪ್ರೀತಂ ಧುಂಡಸಿ, ಖಜಾಂಚಿಯಾಗಿ ಶ್ರೀ ಧನ್ಯಕುಮಾರ್ ಬಿಳಿಚೋಡು, ಸಹ ಖಜಾಂಚಿಯಾಗಿ ಶ್ರೀ ಅಶೋಕ್ ಡಿ. ಬೇತೂರು ಇವರುಗಳು ಪದಾಧಿಕಾರಿಗಳಾಗಿ ಆಯ್ಕೆಯಾಗಿದ್ದಾರೆ.

ಕಾರ್ಯಕಾರಿ ಸಮಿತಿ ಸದಸ್ಯರಾಗಿ ಶ್ರೀ ಸುದರ್ಶನ್‌ಕುಮಾರ್ ಎಂ.ಎ. ಶ್ರೀ ಆದಿನಾಥ್ ಎಸ್., ಶ್ರೀ ಅಜಿತ್ ಕುಮಾರ್ ಬಿ.ಎಸ್. ಶ್ರೀ ಟಾಕಪ್ಪ ಎಸ್.ಕೆ., ಶ್ರೀ ಪಾರ್ಶ್ವನಾಥ್ ಎಸ್.ಜಿ. ಶ್ರೀ ಪ್ರಶಾಂತ್‌ಕುಮಾರ್ ಎಂ.ಪಿ. ಶ್ರೀ ಧರಣೇಂದ್ರ ಪ್ರಸಾದ್ ಮತ್ತು ಶ್ರೀ ಮಂಜುನಾಥ್ ಮುತ್ತಿಗಿ ಇವರುಗಳು ಆಯ್ಕೆಯಾಗಿರುತ್ತಾರೆ.

## ನಿಧನ



**ಹೊಂಬುಜ:** ಜೈನ ಮಠದ ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿ ಬಸದಿಯ ಪೂಜಾ ಕೈಂಕರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದ ಹಿರಿಯ ಪುರೋಹಿತರಾದ ಶ್ರೀ ಹೆಚ್.ಎ. ನಾಗರಾಜ ಇಂದ್ರರವರು 15-04-2024ರಂದು 68ನೇ ವಯಸ್ಸಿಗೆ ನಿಧನರಾದರು



**ವರಂಗ :** ಇಲ್ಲಿಯ ಕೆರೆಬಸದಿಯ ಪ್ರಧಾನ ಅರ್ಚಕರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಮೃತ್ಯುಂಜಯ ಇಂದ್ರರವರು ದಿನಾಂಕ 14-06-2024ರಂದು 87ನೇ ವಯಸ್ಸಿಗೆ ನಿಧನರಾದರು. ಇವರ ಆದರ್ಶ ಗುಣಗಳು ಅವರ ಪರಿವಾರದವರಿಗೆ ಒಲಿಯಲಿ ಹಾಗೂ ದುಃಖವನ್ನು ಸಹಿಸುವ ಶಕ್ತಿಯನ್ನು ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಜಗನ್ಮಾತೆ ಶ್ರೀಪದ್ಮಾವತಿ ಅಮ್ಮನವರು ಕರುಣಿಸಲೆಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಪ್ರಾರ್ಥಿಸಿದ್ದಾರೆ.

## "ಸರ್ವರೂ ಕ್ಷೇಮಾಭ್ಯುದಯದ ಧಾರ್ಮಿಕ ಪ್ರಜ್ಞಾವಂತರಾಗಬೇಕು...."

### ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ.... ಜನ್ಮದಿನದ ಸಂದೇಶ



ಭಾರತೀಯ ಧಾರ್ಮಿಕ ಸಂಸ್ಕಾರ, ಧರ್ಮ ಸಂದೇಶ, ತೀರ್ಥಂಕರರ, ಯಕ್ಷಯಕ್ಷಿಯರ ವೃತ್ತಾಂತಗಳು ಧರ್ಮ ಪಾಠದ ಮೂಲವಾಗಿದೆ. ವಿಶ್ವದ ಇತರ ಧರ್ಮಗಳ ಉಪದೇಶಗಳಿಗಿಂತ ಸರಳ, ಸಾತ್ವಿಕ ಭೋಧನೆಯನ್ನು ಜೈನ ಧರ್ಮ ಸಾರಿದೆ ಎಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ತಮ್ಮ ಜನ್ಮದಿನದಂದು ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಶ್ರೀ ಪದ್ಮಾವತಿ ದೇವಿ, ಶ್ರೀ ನೇಮಿನಾಥ ಸ್ವಾಮಿ, ಶ್ರೀ ಆದಿನಾಥ ಸ್ವಾಮಿ, ಶ್ರೀ ಕೂಷ್ಮಾಂಡಿನಿ ದೇವಿ, ಶ್ರೀ ಸರಸ್ವತಿ ದೇವಿ ಸನ್ನಿಧಿಯಲ್ಲಿ ವಿಶೇಷ ಪೂಜೆ ಸಮರ್ಪಿಸಿ ಭಕ್ತರನ್ನು ಉದ್ದೇಶಿಸಿ ಪ್ರವಚನವಿತ್ತರು.

ಸರ್ವರೂ ಕ್ಷೇಮಾಭ್ಯುದಯದ ಧಾರ್ಮಿಕ ಪ್ರಜ್ಞೆಯಿಂದ ಕರ್ತವ್ಯ ನಿರ್ವಹಿಸಬೇಕು. ವೈಯಕ್ತಿಕ ಜೀವನ ದಾರಿ ಸುಗಮವಾದಂತೆ ರಾಜ್ಯ, ರಾಷ್ಟ್ರ ಅಭ್ಯುದಯದ ಶಿಖರಪ್ರಾಯ ಆಗುತ್ತದೆ ಎನ್ನುವ ಧರ್ಮ ಸಂದೇಶ ನೀಡಿ ಹರಸಿದರು.

ಹುಂಚ ಜೈನ ಸಮಾಜ ಬಾಂಧವರು, ಪರವೂರ ಭಕ್ತರು, ಶ್ರೀ ಮಠದ ಸೇವಾಕಾಂಕ್ಷಿ ಸಿಬ್ಬಂದಿ ವರ್ಗದವರು ಪೂಜ್ಯ ಸ್ವಾಮೀಜಿಯವರಿಗೆ ಶ್ರೀಫಲ ಅರ್ಪಿಸಿದರು. ದೇಶ ವಿದೇಶಗಳ ಭಕ್ತರು ಶ್ರೀಗಳ ಜನ್ಮದಿನದ ಭಕ್ತಿಪೂರ್ವಕ ಶುಭ ಸಂದೇಶ ಕಳಿಸಿದ್ದರು.

## ಸೂತಕವಿಧಿ ಕೃತಿ ಲೋಕಾರ್ಪಣೆ




**ಹೊಂಬುಜ : ಮೇ 18:** ಬೆಂಗಳೂರಿನ ಪಂಡಿತರತ್ನ ಎ. ಶಾಂತಿರಾಜ ಶಾಸ್ತ್ರಿ ಟ್ರಸ್ಟ್ ಪ್ರಕಟಿಸಿರುವ 'ಸೂತಕವಿಧಿ' ಕೃತಿಯನ್ನು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಬಿಡುಗಡೆ ಮಾಡಿರುತ್ತಾರೆ. ಈ ಸಂದರ್ಭದಲ್ಲಿ ಟ್ರಸ್ಟಿನ ಅಧ್ಯಕ್ಷರಾದ ಎಸ್. ಜಿತೇಂದ್ರ ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಜೈನ ಧಾರ್ಮಿಕ ಗ್ರಂಥಗಳು ಲಭ್ಯ : ಬಹುಕಾಲದಿಂದ ನಿರೀಕ್ಷಿತ ಹಾಗೂ ಅನುಪಲಬ್ಧವಾಗಿದ್ದ ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿಯವರ ಇಷ್ಟೋಪದೇಶ, ತೀರ್ಥವಂದನಾ, ಪಂಚಸ್ತೋತ್ರ ಮತ್ತು ತತ್ವಾರ್ಥಸೂತ್ರ (ಪೂಜಾಪಾಠ ಸಹಿತ) ಸೂತಕವಿಧಿ, ಭಕ್ತಾಮರಸ್ತೋತ್ರ ಉತ್ಕೃಷ್ಟ ಧಾರ್ಮಿಕ ಗ್ರಂಥಗಳು ಪುನರ್ಮುದ್ರಣವಾಗಿ ಧರ್ಮಾಭಿಮಾನಿಗಳ ಸ್ವಾಧ್ಯಾಯಕ್ಕಾಗಿ ಶಾಂತಿರಾಜಶಾಸ್ತ್ರಿ ಟ್ರಸ್ಟಿನಲ್ಲಿ ಉಪಲಬ್ಧವಿವೆ ಎಂದು ಟ್ರಸ್ಟಿನ ಮ್ಯಾನೇಜಿಂಗ್ ಟ್ರಸ್ಟಿ ಡಿ. ನೇಮಿಚಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 20ನೇ ವಾರ್ಷಿಕ ಪೂಜಾ ಮಹೋತ್ಸವ



**ಶಿವಮೊಗ್ಗ :** ಇಲ್ಲಿಯ ಮಹಾವೀರ ನಗರದ ಶ್ರೀ 1008 ಆದಿನಾಥ ಸ್ವಾಮಿ ಜಿನಮಂದಿರದಲ್ಲಿ ದಿಗಂಬರ ಜೈನ ಸಂಘದ ವತಿಯಿಂದ ಭಗವಾನ್ ಶ್ರೀ ಆದಿನಾಥ ಸ್ವಾಮಿ ಹಾಗೂ ಶ್ರೀ ಪದ್ಮಾವತಿ ದೇವಿ ಮತ್ತು ಶ್ರೀ ಜ್ವಾಲಾಮಾಲಿನೀ ದೇವಿ ಪ್ರತಿಷ್ಠಾಪನಾ ಮಹೋತ್ಸವದ 20ನೇ ವರ್ಷದ ವಾರ್ಷಿಕ ಪೂಜಾ ಮಹೋತ್ಸವವು ಮೇ. 19, 2024ರ ಭಾನುವಾರದಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಗಳವರ ಪಾವನ ಸಾನಿಧ್ಯದಲ್ಲಿ ನೆರವೇರಿತು.

ಈ ನಿಮಿತ್ತ ಬೆಳಿಗ್ಗೆ 7.00 ಗಂಟೆಗೆ ನಿತ್ಯಪೂಜೆ, 7.30ಕ್ಕೆ 'ಭಕ್ತಾಮರ ಆರಾಧನೆ ವಿಧಾನ, ಮಧ್ಯಾಹ್ನ 11.00 ಗಂಟೆಗೆ ಶ್ರೀ 1008 ಆದಿನಾಥ ಸ್ವಾಮಿಗೆ 108 ಕಳಶಾಭಿಷೇಕ ಹಾಗೂ ಪಂಚಾಮೃತ ಅಭಿಷೇಕವು ನೆರವೇರಿತು. ನಂತರ ಪರಮಪೂಜ್ಯ ಶ್ರೀಗಳ ಸಾನಿಧ್ಯದಲ್ಲಿ ಧಾರ್ಮಿಕ ಸಭೆಯನ್ನು ಏರ್ಪಡಿಸಲಾಯಿತು.

ಪೂಜಾ ಸೇವಾಕರ್ತರಾಗಿ ಶಿವಮೊಗ್ಗದ ಅರಳಿಕಟ್ಟೆ ಶ್ರೀ ರವೀಂದ್ರಕುಮಾರ ಮತ್ತು ಕುಟುಂಬದವರು, ಶ್ರೀಮತಿ ಪದ್ಮಶ್ರೀ ಮತ್ತು ಜೋಗಳ ಶಾಂತರಾಜ ಮತ್ತು ಮಕ್ಕಳು, ಉಪಹಾರದ ಸೇವೆಯನ್ನು ಹಾರ್ನಹಳ್ಳಿ ಶ್ರೀಮತಿ ಸೂರ್ಯಕಲಾ ನಾಗರಾಜಪ್ಪ ಮತ್ತು ಮಕ್ಕಳು, ಮೊಮ್ಮಕ್ಕಳು, ಮಧ್ಯಾಹ್ನದ ಭೋಜನ ಸೇವೆಯನ್ನು ಶಿವಮೊಗ್ಗದ ಪದ್ಮಶ್ರೀ ಕಲರ್‌ಲ್ಯಾಬ್‌ನ ಶ್ರೀಮತಿ ಎಂ.ಎ. ಸವಿತ ಮತ್ತು ಎಂ.ಸಿ. ಅಭಿನಂದನ್‌ರವರು ವಹಿಸಿಕೊಂಡಿದ್ದರು.

ಶಿವಮೊಗ್ಗದ ದಿಗಂಬರ ಜೈನ ಸಂಘ, ಜೈನ್ ಮಿಲನ್, ಪ್ರಿಯಕಾರಿಣಿ ಮಹಿಳಾ ಸಮಾಜದ ಪದಾಧಿಕಾರಿಗಳು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಧರ್ಮಬಾಂಧವರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ದ್ವಿತೀಯ ವಾರ್ಷಿಕ ಪೂಜಾ ಮಹೋತ್ಸವ



**ಸಾಗರ :** ಇಲ್ಲಿಯ ನೆಹರೂ ಮೈದಾನದಲ್ಲಿರುವ ಐತಿಹಾಸಿಕ ಶ್ರೀ ಆದಿನಾಥ ತೀರ್ಥಂಕರರ ಪಂಚಕಲ್ಯಾಣ ಮಹೋತ್ಸವದ ದ್ವಿತೀಯ ವಾರ್ಷಿಕ ಪೂಜಾ ಮಹೋತ್ಸವವು ದಿನಾಂಕ 29-05-2024ರ ಬುಧವಾರದಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಪಾವನ ಸಾನಿಧ್ಯ, ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ವೈಭವದಿಂದ ನೆರವೇರಿತು.

ಅಂದು ಬೆಳಿಗ್ಗೆ ನಿತ್ಯವಿಧಿ ಸಹಿತ ಪುಣ್ಯಾಹವಾಚನ, ಧ್ವಜಾರೋಹಣ, ತೋರಣಮುಹೂರ್ತ, ಶಾಂತಿಹೋಮ ಹಾಗೂ ಧಾಮಸಂಪ್ರೋಕ್ಷಣೆ, ಬೃಹತ್ ಭಕ್ತಾಮರ ಆರಾಧನೆ, ಪಂಚಾಮೃತ ಅಭಿಷೇಕ ಹಾಗೂ 108 ಮಂಗಲ ಕಲಶ ಅಭಿಷೇಕ, ಅಷ್ಟವಿಧಾರ್ಚನೆ, ಪೂರ್ಣಾರ್ಘ್ಯ, ಮಹಾಮಂಗಳಾರತಿ, ಮಧ್ಯಾಹ್ನ ಧಾರ್ಮಿಕ ಸಭೆ, ಪೂಜ್ಯಶ್ರೀಗಳವರ ಪಾದಪೂಜೆ, ಆಶೀರ್ವಚನ ಹಾಗೂ ಪ್ರಸಾದ ವಿನಿಯೋಗ ಇತ್ಯಾದಿ ಕಾರ್ಯಕ್ರಮಗಳು ನೆರವೇರಿದವು. ಪೂಜಾ ವಿಧಿ-ವಿಧಾನಗಳನ್ನು ಬಸದಿಯ ಪುರೋಹಿತ ಅಶೋಕ ಕುಮಾರ ಇಂದ್ರ ನೆರವೇರಿಸಿದರು. ಸಾಗರದ ದಿಗಂಬರ ಜೈನ ಸಮಾಜ, ಶ್ರೀ ಪದ್ಮಶ್ರೀ ಮಹಿಳಾ ಸಮಾಜ ಹಾಗೂ ಸಮಸ್ತ ಶ್ರಾವಕ-ಶ್ರಾವಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಭಗವಂತರ ಕೃಪೆಗೆ ಪಾತ್ರರಾದರು.

## ಸೀತಕಲ್ಲು ಶ್ರೀ ಪಾರ್ಶ್ವನಾಥ ತೀರ್ಥಂಕರ-ಮಾತೆ ಪದ್ಮಾವತಿ ಅಮ್ಮನವರ ವಾರ್ಷಿಕ ಪೂಜೆ

# "ನಿಷ್ಕಳಂಕ ಭಕ್ತಿಯಿಂದ ಭಗವಂತನ ದರ್ಶನ ಸಾಧ್ಯ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ತುಮಕೂರು:** ಮಾನವನ ನಿಷ್ಕಳಂಕ ಭಕ್ತಿ, ದರ್ಶನ, ಸ್ತುತಿಯಿಂದ ಪಾಪ ನಾಶವಾಗಲಿದೆ. ಎಲ್ಲವನ್ನು ತ್ಯಾಗ ಮಾಡಿದಾಗ ಮೋಕ್ಷ ಸಾಧ್ಯವಾಗಲಿದೆ. ನಿಷ್ಕಳಂಕ ಭಕ್ತಿಯಿಂದ ಭಗವಂತನ ದರ್ಶನ ಸಾಧ್ಯ ಎಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು ಸೀತಕಲ್ಲು ಗ್ರಾಮದ ಶ್ರೀ ಪಾರ್ಶ್ವನಾಥ ತೀರ್ಥಂಕರ-ಮಾತೆ ಶ್ರೀ ಪದ್ಮಾವತಿ ಅಮ್ಮನವರ ವಾರ್ಷಿಕ ಪೂಜಾ ಮಹೋತ್ಸವದ ಪಾವನ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

**ನಿಷ್ಕಳಂಕ ಮನಸ್ಸಿನಿಂದ ತ್ಯಾಗ ಮಾಡಿದಾಗ ಸಂಕಟಗಳು ದೂರವಾಗಲಿದೆ. ಅಂತರಂಗದ ಸ್ಮರಣೆಯಿಂದ ಮಾನವ ಶುದ್ಧವಂತನಾಗಿ ಪುಣ್ಯ ಸಂಪಾದಿಸಲಿದ್ದಾನೆ. ಪ್ರೀತಿ, ಭಕ್ತಿ, ಆರಾಧನೆ ಸಂಪತ್ತಿನ ಪ್ರತಿಮೆಗಳಾಗಿವೆ. ಭಗವಂತನನ್ನು ಪ್ರೀತಿಸುವ ಗುಣ ರೂಪಿಸಿಕೊಳ್ಳಬೇಕು. ಜೈನ ಧರ್ಮದ ಪೂಜೆ ಅಭಿಷೇಕ, ಆರಾಧನೆ, ಸಂಸ್ಕೃತಿ, ಸಂಸ್ಕಾರಗಳನ್ನು ಉಳಿಸಿ ಬೆಳೆಸಬೇಕೆಂದರು. ಆತ್ಮಕಲ್ಯಾಣಕ್ಕೆ ಶಾಶ್ವತ ಸುಖ ಸಂಪಾದಿಸಲು ಭಕ್ತಿ ಅಗತ್ಯ. ಇದರಿಂದ ಭಗವಂತನ ದರ್ಶನವಾಗಿ ಸುಖ ಪ್ರಾಪ್ತಿಯಾಗಲಿದೆ** ಎಂದರು.

ಸೀತಕಲ್ಲು ಕ್ಷೇತ್ರವು ನೂರಾರು ವರ್ಷಗಳ ಇತಿಹಾಸವಿದ್ದು, ಇದು ಸಂಪತ್ ಭರಿತವಾದ ಕೈಗಾರಿಕಾ ಪ್ರದೇಶವಾಗಿದ್ದು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು ಹಲವಾರು ದೇಗುಲ-ಬಸದಿಗಳನ್ನು ಕಟ್ಟಿದ್ದಾರೆ ಎಂದು ಲೇಖಕರಾದ ರತ್ನಾಕರ್ ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ ಎಂದ ಅವರು ಬಸದಿಗೆ ಬೆಳ್ಳಿ ಬಾಗಿಲು ನಿರ್ಮಿಸುವಂತೆ ಸಲಹೆ ನೀಡಿದರು.

ಮಂಗಲ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಕನಕಗಿರಿ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಮಹಾಸ್ವಾಮಿಗಳು ಜೈನ ಧರ್ಮದ ಶ್ರದ್ಧಾವಂತ, ವಿವೇಕ, ಕ್ರಿಯಾವಂತ ಎಂಬುದು ಶ್ರಾವಿಕ ಧರ್ಮದ ಮೂಲ. ಲೋಕಕಲ್ಯಾಣ ಮಾರ್ಗ, ಜೀವಿಗಳ ಸಂರಕ್ಷಣೆ, ಈ ಧರ್ಮದಲ್ಲಿದ್ದು ಇಂತಹ ಧರ್ಮದ ಆಚರಣೆ ಶ್ಲಾಘನೀಯ. ಕನ್ನಡ ಭೂಮಿ, ಭಾಷೆಯನ್ನು ಜೈನ ಧರ್ಮ ಕಾಪಾಡಿಕೊಂಡು ಬಂದಿದ್ದು, ಭಾಷೆ ಸಾಹಿತ್ಯಿಕವಾದದ್ದು ಸಮೃದ್ಧವಾಗಿದೆ. ಪುಣ್ಯಕ್ಷೇತ್ರಗಳ ಶ್ರೀಮಂತಿಕೆ ಬೆಳೆದಾಗ ಆತ್ಮಕಲ್ಯಾಣವಾಗಲಿದೆ ಎಂದರು.

ಬೆಂಗಳೂರಿನ ಉದ್ಯಮಿ ಮಹೇಂದ್ರ ಜೈನ ಮಾತನಾಡಿದರು. ಸೀತಕಲ್ಲು ಶ್ರೀ ಪಾರ್ಶ್ವನಾಥ ಶ್ರೀ ಪದ್ಮಾವತಿ ಜಿನಮಂದಿರ ಸಮಿತಿ ಅಧ್ಯಕ್ಷ ಪದ್ಮರಾಜಯ್ಯ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ರಾಜಮ್ಮ ಎಸ್.ಪಿ. ಪಾಯಪ್ಪ ಚಾರಿಟಬಲ್ ಟ್ರಸ್ಟ್‌ನ ವತಿಯಿಂದ ಸೀತಕಲ್ಲು ಗ್ರಾಮದ ನಿವಾಸಿಗಳಿಗೆ ಸೀರೆ ವಿತರಿಸಲಾಯಿತು.

WWW.HOMBUJAPADMAVATI.ORG

ವಾರ್ಷಿಕ ಪೂಜಾ ಮಹೋತ್ಸವದ ಅಂಗವಾಗಿ ಬೆಳಗ್ಗೆ ಪೂಜಾ ವಿಧಿ-ವಿಧಾನಗಳು ಸುಮಂಗಲೆಯರಿಂದ ಜಲಯಾತ್ರೆ ಮಾತೆ ಪದ್ಮಾವತಿ ಅಮ್ಮನವರಿಗೆ ವಿಶೇಷ ಕಳಶಾಭಿಷೇಕ, ಮಹಾಮಂಗಳಾರತಿಗಳು ನಡೆದವು. ಸಂಜೆ ಶ್ರೀ ಪಾರ್ಶ್ವನಾಥ-ಮಾತೆ ಶ್ರೀ ಪದ್ಮಾವತಿ ಅಮ್ಮನವರ ಭವ್ಯ ಮೆರವಣಿಗೆ ಗ್ರಾಮದ ರಾಜಬೀದಿಗಳಲ್ಲಿ ನಡೆಯಿತು.

ಈ ಕಾರ್ಯಕ್ರಮದಲ್ಲಿ ಸೀತಕಲ್ಲು, ತುಮಕೂರು, ಬೆಂಗಳೂರು, ಎಲೆಕ್ಯಾತನಹಳ್ಳಿ, ಕಾಳೇನಹಳ್ಳಿ, ಗೌರಿಬಿದನೂರು, ಅರಸಾಪುರ, ಪಾಲನಹಳ್ಳಿ ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಶ್ರಾವಕ-ಶ್ರಾವಕಿಯರು ಭಾಗವಹಿಸಿದ್ದರು.



ಗುರುದೇವ
GURUDEVA MONTHLY
RNI No. 13248/57-POSTEL REGD No. KA/SK/SMG 198/2024-26
Date of Posting 17th of every month. Sub Post office, Humcha - 577436
ವಾರ್ಷಿಕ ಚಂದಾ : ರೂಪಾಯಿ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000-00 ಮಾತ್ರ
ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722